**ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು.**

**ಸ್ಪೇಷಲ್ ಕೇಸ್ ನಂ : 132/2017**

**ಚಾ.ಸಾ : 2        ಪ್ರಾ.ಸಾ : 2**

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 29.10.2022**

| | | |
|---|---|---|
| ಸಾಕ್ಷಿಯ ಹೆಸರು | : | ಬಸಲಿಂಗಪ್ಪ |
| ತಂದೆಯ ಹೆಸರು | : | ತಿಪ್ಪಯ್ಯ ನಾಯಕ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಪ್ರ.ದ.ಸ ಜಿಲ್ಲಾ ಪಂಚಾಯತ ರಾಯಚೂರ |
| ವಿಳಾಸ | : | ರಾಯಚೂರ |

**ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ವಿಶೇಷ ಅಭೀಯೋಜಕರಿಂದ**

ನಾನು ದಿ.02.07.2012 ರಿಂದ 25.01.2019 ರ ವರೆಗೆ ದೇವದುರ್ಗ ತಾಲೂಕ ಪಂಚಾಯತಿ ಕಾರ್ಯಾಲಯದಲ್ಲಿ ಪ್ರ.ದ.ಸ ಎಂದು ಕೆಲಸ ಮಾಡಿರುತ್ತೇನೆ.

ನನಗೆ ಲೋಕಾಯುಕ್ತ ಪೋಲಿಸರು ದಿ.08.09.2015 ರಂದು ಹೀರೆಬೂದೂರು ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ಹಂಚಿನಾಳ ಗ್ರಾಮದಲ್ಲಿ ಎನ್.ಆರ್.ಎ.ಜಿ ಯೋಜನೆ ಅಡಿಯಲ್ಲಿ ಎ.ಜಿ ಇವರ ಅಡಿಟನಲ್ಲಿ ತಕರಾರು ಆಗಿದ್ದರಿಂದ ಕಾಮಗಾರಿ ನಡೆದ ಸ್ಥಳದ ಸ್ಥಳ ಪಂಚನಾಮೆ ಮಾಡಬೇಕು ಅಂತಾ ಲೋಕಾಯುಕ್ತ ಸಿ.ಪಿ.ಐ ರವರು ದೇವದುರ್ಗ ಐ.ಬಿ ಗೆ ಪಂಚನಾಮೆ ಮಾಡುವುದು ಇದೆ ನೀವು ಪಂಚರಾಗಬೇಕು ಎಂದು ನನಗೆ ಕರೆದಿದ್ದರು.

ಸಾಕ್ಷಿ ನಿ.ಪಿ-1 ರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಸದರಿ ಪರಿಶೀಲನಾ ಪಂಚನಾಮೆಯನ್ನು ಈಗಾಗಲೇ ನಿ.ಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಗಳನ್ನು ನಿ.ಪಿ-1(ಈ) ರಿಂದ 1(ಹೆಚ್) ಎಂದು ಗುರುತಿಸಲಾಯಿತು.

ನನ್ನ ಜೊತೆ ಇನ್ನೊಬ್ಬ ಸಹಪಂಚರಾದ ಪ್ರಾ.ಸಾ-1 ಅಲ್ಲಾಭಕ್ಷ ಇದ್ದರು. ಅಲ್ಲಿ ಸಿ.ಪಿ.ಐ ರವರು ನನಗೆ ಶಿವರಾಮ ಇವರನ್ನು ತೋರಿಸಿ ಕರೆಗುಡ್ಡ ಗ್ರಾಮ ಪಂಚಾಯತಿಯ ಕಾರ್ಯದರ್ಶಿ ಇದ್ದು, ಅವರ ಸುರ್ಪದಿಯಲ್ಲಿದ್ದ ಎಂ.ಎನ್.ಆರ್.ಜಿ ಯೋಜನೆಯ ಕಡತಗಳನ್ನು ಜಪ್ತಿ ಮಾಡಿದ್ದು, ಅವುಗಳನ್ನು ಎ.ಜಿ ಆಡಿಟ್ ನವರು ಪರಿಶೀಲಿಸಿ, ಅದರಲ್ಲಿ ಬರೆದಿಟ್ಟ ಲೆಕ್ಕ ತಪ್ಪು ಇರುತ್ತದೆ ಎಂದು ತಿಳಿಸಿದರು. ಅಲ್ಲಿ ಗೌಸ

ಮೋಯಿನುದ್ದಿನ, ಪಿ.ಡಿ.ಓ ಎಂದು ತಾಲೂಕ ಪಂಚಾಯತಿ ದೇವದುರ್ಗದಲ್ಲಿ ಕೆಲಸ ಮಾಡುತ್ತಿರುವಾಗ ಎ.ಜಿ ಆಡಿಟ್ ತಂಡದ ಅಧಿಕಾರಿಗಳು ಬಂದಾಗ, ಸಿ.ಪಿ.ಐ ಸಾಹೇಬರು ಗೌಸ ಮೋಯಿನುದ್ದಿನ ಇವರಿಗೆ ಕಾಮಗಾರಿ ಕಡತಗಳನ್ನು ಕೊಡಲು ಕೇಳಿದ್ದರು. ಸದರಿ ಗೌಸ ಮೋಯಿನುದ್ದಿನ, ಪಿ.ಡಿ.ಓ ಇವರು ಕಾಮಗಾರಿಗೆ ಸೇರಿದ ಎರಡು ಕಡತಗಳನ್ನು ಚಾರ್ಜನಲ್ಲಿ ನನಗೆ ಕೊಟ್ಟಿಲ್ಲ ಎಂದು ಹೇಳಿದರು. ಆಗ ಶಿವರಾಮ ಇವರಿಗೆ ಕೇಳಿದಾಗ ಸದರಿ ಎರಡು ಕಡತಗಳು ನನ್ನ ಬಳಿ ಇವೆ ಎಂದು ಸಿ.ಪಿ.ಐ ಸಾಹೇಬರಿಗೆ ನಮ್ಮ ಸಮಕ್ಷಮ ಕೊಟ್ಟಿರುತ್ತಾರೆ.

ನಂತರ ನಾನು, ಪ್ರಾ.ಸಾ-1, ಸಿ.ಪಿ.ಐ, ಗೌಸ್ ಮೋಹಿನುದ್ದಿನ ಮತ್ತು ಶಿವರಾಮ ಎಲ್ಲರೂ ಸರ್ಕಾರಿ ವಾಹನದಲ್ಲಿ ಹಂಚಿನಾಳ ಗ್ರಾಮದಲ್ಲಿರುವ ಕಾಮಗಾರಿ ಕೆಲಸ ನಡೆದ ಆಶ್ರಯ ಕಾಲೋನಿಗೆ ಸ್ಥಳ ಪರಿಶೀಲನೆಗಾಗಿ ಹೋಗಿರುತ್ತೇವೆ. ಅಲ್ಲಿ ಹೋಗಿ ನೋಡಿದಾಗ ಚರಂಡಿ ಮತ್ತು ರಸ್ತೆ ನಿರ್ಮಾಣದ ಕಾಮಗಾರಿ ಮತ್ತು ರಸ್ತೆ ಅಭಿವೃದ್ದಿಯ ಕಾಮಗಾರಿ ಕೆಲಸವನ್ನು ಪರಿಶೀಲಿಸಿರುತ್ತಾರೆ. ಆ ಸಮಯದಲ್ಲಿ ವೆಂಕಟೇಶ ಗಲಗ, ಎ.ಈ.ಈ ಇವರು ಸಹ ಸ್ಥಳಕ್ಕೆ ಬಂದಿದ್ದರು. ಸದರಿ ವೆಂಕಟೇಶ ಗಲಗ, ಎ.ಈ.ಈ ಇವರು ಕಾಮಗಾರಿಗಳ ಬಗ್ಗೆ ಮತ್ತು ಕೆಲಸ ಮಾಡಿದ ಬಗ್ಗೆ ಕಡತವನ್ನು ಪರಿಶೀಲನೆ ಮಾಡಿದರು. ನಂತರ ಕಾಮಗಾರಿ ಕೆಲಸ ಮಾಡಿದ ರಸ್ತೆ, ಚರಂಡಿಗಳು ಮತ್ತು ರಸ್ತೆ ಅಭಿವೃದ್ದಿ ಮಾಡಿದ ಬಗ್ಗೆ ಅಳತೆಗಳನ್ನು ಮಾಡಿರುತ್ತಾರೆ.

ಸದರಿ ವೆಂಕಟೇಶ ಗಲಗ, ಎ.ಈ.ಈ ಇವರು ರಸ್ತೆ ಅಳತೆ ಮಾಡಿದಾಗ ರಸ್ತೆ 150 ಮೀಟರ ಉತ್ತರ ದಕ್ಷಿಣವಾಗಿ ಇತ್ತು. ಮತ್ತೊಂದು 24 ಮೀಟರ ಪೂರ್ವ ಪಶ್ಚಿಮ ಅಡ್ಡ ಮೂರು ರಸ್ತೆಗಳು ಇದ್ದವು. ಇನ್ನೊಂದು ಕಾಮಗಾರಿ 16 ಮೀಟರ ರಸ್ತೆ ನಿರ್ಮಾಣ ಆಗಿತ್ತು. ಒಟ್ಟು 238 ಮೀಟರ್ ರಸ್ತೆ ಕಾಮಗಾರಿ ಆಗಿತ್ತು. ಆದರೆ ಸದರಿ ಕಾಮಗಾರಿ ಎಸ್ಟಿಮೇಟ್ ಪ್ರಕಾರ 580 ಉದ್ದಳತೆಯ ರಸ್ತೆ ಅಭಿವೃದ್ದಿ ಆಗಬೇಕಾಗಿತ್ತು ಎಂದು ಕಡತದಲ್ಲಿ ಕಂಡು ಬಂದಿರುತ್ತದೆ. ನನ್ನ ಸಮಕ್ಷಮ ಶಿವರಾಮ ಕಾಯದರ್ಶಿ ಇವರು ಹಾಜರುಪಡಿಸಿದ ಎರಡು ಕಾಮಗಾರಿಗಳ ಕಡತದ ದಾಖಲೆಳನ್ನು ಸಿ.ಪಿ.ಐ ರವರು ತಮ್ಮ ವಶಕ್ಕೆ ಪಡೆದಿರುತ್ತಾರೆ. ಸದರಿ ದಾಖಲೆಗಳನ್ನು ಈಗಾಗಲೇ ನಿ.ಪಿ-1 ರಿಂದ 19 ಎಂದು ಗುರುತಿಸಲಾಗಿದೆ. ಸದರಿ ಸ್ಥಳದಲ್ಲಿ ತೆಗೆದ ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿ.ಪಿ-20 ರಿಂದ 22 ಎಂದು ಗುರುತಿಸಲಾಗಿದೆ. ನಿ.ಪಿ-20 ರ ಎರಡು ಭಾವಚಿತ್ರಗಳಲ್ಲಿ ನಾನು ಇರುತ್ತೇನೆ. ನಂತರ ಸ್ಥಳದಲ್ಲಿ ಇದ್ದ ಶಿವರಾಜ ಇವರ ಮನೆಯಲ್ಲಿ ಲ್ಯಾಪಟಾಪ ಇತ್ತು, ಸದರಿ ಲ್ಯಾಪಟಾಪನಲ್ಲಿ ಬೆರಳಚ್ಚು ಮಾಡಿ ಮುದ್ರಣ ಮಾಡಿ ಸದರಿ ಪಂಚನಾಮೆಗೆ ನಮ್ಮ ಸಹಿಗಳನ್ನು ಪಡೆದಿರುತ್ತಾರೆ.

**<u>ಪಾಟೀ ಸವಾಲು : ಆರೋಪಿ ನಂ.2 ಪರ ಶ್ರೀ ಕೆ.ಡಿ.ಎನ್ ವಕೀಲರಿಂದ</u>**

ನನ್ನ ಸ್ವಂತ ಊರು ದೇವದುರ್ಗದ ಕಾಕರಗಲ ಎಂದರೆ ಸರಿ. ನಾನು ದೇವದುರ್ಗದ ತಾಲೂಕೂ ಪಂಚಾಯತಿ ಕಛೇರಿಯಲ್ಲಿ ಕೆಲಸ ಮಾಡುತಿದ್ದೇ. ನಾನು ಪ್ರತಿದಿನ ನನ್ನ ಊರಿನಿಂದ ದೇವದುರ್ಗಕ್ಕೆ ಕೆಲಸಕ್ಕೆ ಬಂದು ಹೋಗುವುದು ಮಾಡುತ್ತಿದ್ದೇ ಎಂದರೆ ಸರಿ. ನನಗೆ ಲೋಕಾಯುಕ್ತ ಪೋಲಿಸರು ಕರೆದಿರುವುದಿಲ್ಲ, ಆದರೆ ನಾನು ನನ್ನ ಮೇಲಾಧಿಕಾರಿಗಳ ಸೂಚನೆ ಮೇರೆಗೆ ಹೋಗಿರುತ್ತೇನೆ. ನನ್ನ ಮೇಲಾಧಿಕಾರಿಗಳು ಪಂಚನಾಮೆಗೆ ಪಂಚರಾಗಿ ಹೋಗಲು ಮೌಖಿಕವಾಗಿ ಹೋಗಲು ಸೂಚನೆ ಕೊಟ್ಟಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನಾನು ದೇವದುರ್ಗ ಪ್ರವಾಸಿ ಮಂದಿರಕ್ಕೆ ಹೋದಾಗ ಸಮಯ ಬೆಳಿಗ್ಗೆ 10.45 ಗಂಟೆ ಆಗಿತ್ತು. ಸದರಿ ದೇವದುರ್ಗ ಪ್ರವಾಸಿ ಮಂದಿರದಿಂದ ಹಂಚಿನಾಳ ಗ್ರಾಮಕ್ಕೆ ದ್ವಿಚಕ್ರ ವಾಹನದ ಮೂಲಕ ಹೋಗಲು 40 ನಿಮಿಷ ಸಮಯ ಬೇಕು. ಸ್ಥಳಕ್ಕೆ ಹೋದಾಗ ಅಲ್ಲಿ ಅಳತೆ ಮಾಡಿ ಎಲ್ಲ ಪಂಚನಾಮೆ ಬರೆರುವಷ್ಟರಲ್ಲಿ ಸುಮಾರು ಒಂದೂವರೆ ಗಂಟೆ ಸಮಯ ಆಗಿರುತ್ತದೆ. ನಾವು ದೇವದುರ್ಗದಿಂದ ಹಂಚಿನಾಳಕ್ಕೆ ಹೋದಾಗ ಸಮಯ ಮಧ್ಯಾನ್ಹ 12.15 ಗಂಟೆ ಆಗಿತ್ತು. ಸದರಿ ಪಂಚನಾಮೆಯನ್ನು ಸಂಪೂರ್ಣವಾಗಿ ಮಾಡಿ ಮುಗಿಸಲು 01.45 ಗಂಟೆ ಆಗಿತ್ತು. ಅಲ್ಲಿ ಹಾಜರುಪಡಿಸಿದ 19 ಕಡತಗಳು ಯಾವುದು ಯಾವುದು ಎಂದು ನನಗೆ ನೆನಪಿಲ್ಲ.

ನನಗೆ ಶಿವರಾಜಪ್ಪನ ಹೊಲ ಎಂದು ಹೇಳಲು ಅದರ ಸರ್ವೇ ನಂಬರ ನನಗೆ ಗೊತ್ತಿಲ್ಲ. ಸದರಿ ಸರ್ವೇ ನಂಬರಲ್ಲಿ ಎಷ್ಟು ಎಕರೆ ಇದೆ ಎಂದು ಹೇಳಲು ಆಗುವುದಿಲ್ಲ. ನಾನು ಹೋದಾಗ ಆಡಿಟ್ ತಂಡ ಇರಲಿಲ್ಲ. ಕಾಮಗಾರಿಯ ಅಂದಾಜು 580 ಮೀಟರ್ ಇತ್ತು. ನಾನು ಕಾಮಗಾರಿಯ ಅಂದಾಜು ದಾಖಲೆಯನ್ನು ಓದಿರುವುದಿಲ್ಲ. ನಾವು ಹೋದಾಗ ಶಿವರಾಜ ಗೌಡ ಇದ್ದ. ಆದರೆ ಲೋಕಾಯುಕ್ತ ಪೋಲಿಸರು ಶಿವರಾಜಗೌಡ ಇವರನ್ನು ಪಂಚನಾಮೆ ಬಗ್ಗೆ ಏನೂ ವಿಚಾರಣೆ ಮಾಡಿರುವುದಿಲ್ಲ. 150 ಮೀಟರ ಕಾಮಗಾರಿ ರಸ್ತೆಯ ಉತ್ತರಕ್ಕೆ ರೆಡ್ಡೆಪ್ಪನ ಹೊಲ, ದಕ್ಷಿಣಕ್ಕೆ ಶಿವರಾಜಪ್ಪನ ಮನೆ, ಪೂರ್ವಕ್ಕೆ ಸುರೇಶಪ್ಪ ಇವರ ಹೊಲ ಮತ್ತು ಪಶ್ಚಿಮಕ್ಕೆ ಸುಂಕೆಶ್ವರಹಾಳ ಮತ್ತು ಶಾವಂತಗೇರೆಗೆ ಹೋಗುವ ದಾರಿ ಬರುತ್ತದೆ. ಕಾಮಗಾರಿ ಕೆಲಸವು ಆಶ್ರಯ ಕಾಲೋನಿ ಒಳಗಡೆ ಮೇಲೆ ಹೇಳಿದ ಚೆಕ್ಕಬಂದಿ ಒಳಗಡೆ ಇರುತ್ತದೆ. ನಿ.ಪಿ-22 ಕಾಮಗಾರಿ ಕೆಲಸ ಮಾಡಿದ್ದು ತೋರಿಸುತ್ತದೆ ಎಂದರೆ ಸರಿ. ಕಾಮಗಾರಿ ಸಂಬಂಧಪಟ್ಟಂತೆ ಚರಂಡಿ ಎಷ್ಟು ಆಳ ಕಾಮಗಾರಿಗೆ ಒಳಪಟ್ಟಿರುತ್ತದೆ ಎಂದು ಹೇಳಲು ಆಗುವುದಿಲ್ಲ. ಅಲ್ಲಿ ಕೇವಲ ಒಂದು ಚರಂಡಿ ಕಾಮಗಾರಿ ನಡೆಯುತ್ತಿತ್ತು.

ಅಲ್ಲಿ ಪ್ರತ್ಯೇಕವಾಗಿ ಚರಂಡಿ ಕಾಮಗಾರಿ ಎಂದು  ಇರುವುದಿಲ್ಲ, ಅಲ್ಲಿ ರಸ್ತೆ ಅಭಿವೃದ್ದಿ ಮತ್ತು ಚರಂಡಿ ಕಾಮಗಾರಿ ಬಗ್ಗೆ ಕಾಮಗಾರಿ ಇತ್ತು ಎಂದು ಹೇಳುತ್ತಾರೆ. ನಿ.ಪಿ-1 ರಲ್ಲಿನ ವಿಷಯಗಳನ್ನು ಗುರುಚಂದ್ರ ಇವರು ಬೆರಳಚ್ಚು ಮಾಡಿರುತ್ತಾರೆ, ಆದರೆ ಅವರು ಯಾವ ಊರಿನವರು ಎಂದು ನನಗೆ ಗೊತ್ತಿಲ್ಲ. ನಿ.ಪಿ-1 ರಲ್ಲಿ ಬೆರಳಚ್ಚು ಮಾಡಿದ ನಂತರ ಮುದ್ರಣ ಮಾಡಿ ಪ್ರತಿ ತೆಗೆದ ಬಗ್ಗೆ ನಮೂದು ಇರುವುದಿಲ್ಲ. ಪೋಲಿಸರು ಠಾಣೆಗೆ ಕರೆದು ನನ್ನ ಸಹಿಯನ್ನು ನಿ.ಪಿ-1 ರಲ್ಲಿ ಪಡೆದಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಅಲ್ಲಿ ಎಲ್ಲ ಕಾಮಗಾರಿ ಕೆಲಸಗಳನ್ನು ಅಂದಾಜು ಕಾಮಗಾರಿ ವಹಿ ಪ್ರಕಾರ ಸಂಪೂರ್ಣವಾಗಿ ಮಾಡಿರುತ್ತಾರೆ ಸೂಚಿಸುವುದು ಸರಿಯಲ್ಲ. ನನ್ನ ಸಮಕ್ಷಮ ನಿ.ಪಿ-1 ರಂತೆ ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನಾನು ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಆರೋಪಿ ನಂ.3 ಮತ್ತು 5 ರಿಂದ 7 ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು, ಅನುಮತಿಸಲಾಯಿತು.

**ಮರುವಿಚಾರಣೆ : ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ. ಇದೆ

ಎರಡನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು,
ರಾಯಚೂರು.